<u>**ಕರ್ನಾಟಕ ವಿಧಾನ ಪರಿಷತ್ತು**</u>

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **1635(1857)** |
| **ಸದಸ್ಯರ ಹೆಸರು** | **ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು)** |
| **ಉತ್ತರಿಸಬೇಕಾದ ದಿನಾಂಕ** | **23.03.2026.** |
| **ಉತ್ತರಿಸುವವರು** | **ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು** |

| **ಕ್ರ. ಸಂ.** | **ಪ್ರಶ್ನೆ** | **ಉತ್ತರ** |
|---|---|---|
| ಅ) | ರಾಜ್ಯದ ಅರಣ್ಯ ಇಲಾಖೆಯಲ್ಲಿ ಸುಮಾರು 35 ರಿಂದ 40 ವರ್ಷಗಳಿಂದ ದಿನಗೂಲಿ ನೌಕರರು ಹಾಗೂ ಸೇವೆಯಿಂದ ನಿವೃತ್ತಿ ಹೊಂದಿರುವ ನೌಕರರಲ್ಲಿ ಬಹಳಷ್ಟು ನೌಕರರು ಅರಣ್ಯ ಅಂಚಿನ ಗ್ರಾಮಗಳ ಬುಡಕಟ್ಟು ಮತ್ತು ಹಿಂದುಳಿದ ವರ್ಗದ ಎಷ್ಟು ಜನರು ದಿನಗೂಲಿ ನೌಕರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ; (ಮಾಹಿತಿ ನೀಡುವುದು) | ರಾಜ್ಯದ ಅರಣ್ಯ ಇಲಾಖೆಯಲ್ಲಿ ಸುಮಾರು 35 ರಿಂದ 40 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ಕ್ಷೇಮಾಭಿವೃದ್ಧಿ ದಿನಗೂಲಿ ನೌಕರರ ವಿವರಗಳನ್ನು **ಅನುಬಂಧ-1**ರಲ್ಲಿ ಮತ್ತು ಈಗಾಗಲೇ ಸೇವೆಯಿಂದ ನಿವೃತ್ತಿ ಹೊಂದಿರುವ ಕ್ಷೇಮಾಭಿವೃದ್ಧಿ ದಿನಗೂಲಿ ನೌಕರರ ವಿವರಗಳನ್ನು **ಅನುಬಂಧ-2**ರಲ್ಲಿ ಲಗತ್ತಿಸಿದೆ. |
| ಆ) | ಸದರಿ ದಿನಗೂಲಿ ನೌಕರರು 35 ರಿಂದ 40 ವರ್ಷಗಳ ಕಾಲ ವಿವಿಧ ಇಲಾಖೆಯಲ್ಲಿ ದುಡಿದು ಅವರ ಸಂಧ್ಯಾಕಾಲದ ಸಮಯದಲ್ಲಿ ಜೀವನ ಭದ್ರತೆ ಇಲ್ಲದೆ ಅವರ ಬದುಕು ದುಸ್ಥಿರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸರ್ಕಾರದ ಮುಂದಿನ ಕ್ರಮಗಳ ಕುರಿತು ಮಾಹಿತಿ ನೀಡುವುದು) | • ಕ್ಷೇಮಾಭಿವೃದ್ಧಿ ದಿನಗೂಲಿ ನೌಕರರ ನಿವೃತ್ತಿ ಕಾಲದಲ್ಲಿ ಅವರ ಸೇವೆಯ ಲೆಕ್ಕಾಚಾರದಂತೆ ವರ್ಷಕ್ಕೆ 15 ದಿನಗಳ ಗಳಿಕೆ ರಜೆ ಲೆಕ್ಕದಂತೆ ಉಪಧನ ಪಾವತಿಸಲಾಗುತ್ತಿದೆ.<br>• ಕ್ಷೇಮಾಭಿವೃದ್ಧಿ ದಿನಗೂಲಿ ನೌಕರರು ಆಕಸ್ಮಿಕ ನಿಧನದ ಸಮಯದಲ್ಲಿ ಸರ್ಕಾರದ ಆದೇಶದಂತೆ ಅವರ ಕುಟುಂಬ ವರ್ಗದವರಿಗೆ ರೂ. 5.00ಲಕ್ಷ ದಯಾತ್ಮಕ ಮೊತ್ತ ಪಾವತಿಸಲಾಗುತ್ತಿದೆ. |
| ಇ) | ಸದರಿ ದಿನಗೂಲಿ ನೌಕರರನ್ನು ಖಾಯಂ ನೌಕರರನ್ನಾಗಿ ಮಾಡಿ ಅವರಿಗೆ ಜೀವನ ಭದ್ರತೆ | • ಇಲಾಖೆಯಲ್ಲಿ ದೀರ್ಘಕಾಲದಿಂದ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರನ್ನು ಸರ್ಕಾರದ ಆದೇಶಗಳಲ್ಲಿ |

| | | |
|---|---|---|
| | ಒದಗಿಸುವಂತೆ ಮಾಡಲು ಸರ್ಕಾರದ ಮುಂದಿನ ಕ್ರಮಗಳು ಏನು? | ನಿಗದಿಪಡಿಸಿದ ಅರ್ಹತೆಯಂತೆ ಈ ಹಿಂದೆಯೇ ಸಕ್ರಮಗೊಳಿಸಲಾಗಿರುತ್ತದೆ.<br>• ಅಲ್ಲದೆ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಸೇರಿಕೊಂಡು ಸತತವಾಗಿ ಕಾರ್ಯನಿರ್ವಹಿಸಿ ದಿನಾಂಕ: 10.04.2006ರಂದು ಕನಿಷ್ಠ 10 ವರ್ಷ ಪೂರ್ಣಗೊಳಿಸಿದ ದಿನಗೂಲಿ ನೌಕರರುಗಳನ್ನು ಅರ್ಹತೆಯಂತೆ ಈಗಾಗಲೇ ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ, 2012ರಡಿ ಅಧಿಸೂಚಿಸಲಾಗಿರುತ್ತದೆ. ಅವರುಗಳನ್ನು ಸರ್ಕಾರದಲ್ಲಿ ಖಾಯಂ ಹುದ್ದೆಗಳಲ್ಲಿ ಭರ್ತಿ ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |

**ಕಡತ ಸಂಖ್ಯೆ: ಎಫ್‌ಇಇ 95 ಎಫ್‌ಎನ್‌ಜಿ 2026(ಇ)**

**(ರಾಮಲಿಂಗಾರೆಡ್ಡಿ)**
**ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.**

## ಅನುಬಂಧ-1

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶಿತ ಕ್ಷೇತ್ರ)ರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:1635(1857)ಕ್ಕೆ ಈ ಕೆಳಕಂಡ ನಮೂನೆಯಲ್ಲಿ ಉತ್ತರ ಸಲ್ಲಿಸುವ ಬಗ್ಗೆ.

| **35-40 ವರ್ಷಗಳಿಂದ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಕರ್ನಾಟಕ ಕ್ಷೇಮಾಭಿವೃದ್ಧಿ ಅಧಿಸೂಚಿತ ದಿನಗೂಲಿ ನೌಕರರ ಸಂಖ್ಯೆ** | | | | | |
|---|---|---|---|---|---|
| ಕ್ರಮ ಸಂಖ್ಯೆ | ಹಿಂದುಳಿದ ವರ್ಗ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಅರಣ್ಯ ಅಂಚಿನ ಗ್ರಾಮಗಳ ಬುಡಕಟ್ಟು ಜನಾಂಗ | ಒಟ್ಟು |
| 1 | 986 | 274 | 143 | 3 | 1406 |

Digitally signed by
SASWATI MISHRA
Date: 16-04-2026
11:14:57

ಅಪರ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ
(ಸಿಬ್ಬಂದಿ ಮತ್ತು ನೇಮಕಾತಿ)

## ಅನುಬಂಧ-2

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶಿತ ಕ್ಷೇತ್ರ)ರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:1635(1857)ಕ್ಕೆ ಈ ಕೆಳಕಂಡ ನಮೂನೆಯಲ್ಲಿ ಉತ್ತರ ಸಲ್ಲಿಸುವ ಬಗ್ಗೆ.

**35-40 ವರ್ಷಗಳಿಂದ ನಿವೃತ್ತಿ ಹೊಂದಿರುವ ಕರ್ನಾಟಕ ಕ್ಷೇಮಾಭಿವೃದ್ಧಿ ಅಧಿಸೂಚಿತ ದಿನಗೂಲಿ ನೌಕರರ ಸಂಖ್ಯೆ**

| ಕ್ರಮ ಸಂಖ್ಯೆ | ಹಿಂದುಳಿದ ವರ್ಗ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಅರಣ್ಯ ಅಂಚಿನ ಗ್ರಾಮಗಳ ಬುಡಕಟ್ಟು ಜನಾಂಗ | ಒಟ್ಟು |
|---|---|---|---|---|---|
| 1 | 971 | 215 | 104 | 3 | 1293 |

Digitally signed by
SASWATI MISHRA
Date: 16-04-2026
17:29:00

ಅಪರ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ
(ಸಿಬ್ಬಂದಿ ಮತ್ತು ನೇಮಕಾತಿ)